2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 129/2023</u>

| | | |
|---|---|---|
| ಸಾಕ್ಷಿದಾರರ ಹೆಸರು | - ಯೋಗೇಂದ್ರಚಾರ್ ಎನ್.ಎಸ್. | ಪಿಡಬ್ಲೂ -12 |
| ತಂದೆಯ ಹೆಸರು | - ಲೇ.ಶ್ರೀಕಂಠಚಾರ್ | ಸಿಡಬ್ಲೂ -18 |
| ವಯಸ್ಸು | - 69 ವರ್ಷ | |
| ಉದ್ಯೋಗ | - ನಿವೃತ್ತ ಮುಖ್ಯ ಪೇದೆ. | |
| ವಾಸ ಸ್ಥಳ | - ತಿಪಟೂರು | |

ದಿನಾಂಕಃ 03.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2009 ರಿಂದ 2013 ರವರೆಗೆ ಗೋಣಿಬೀಡು ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. 2015 ರಲ್ಲಿ ನಾನು ನಿವೃತ್ತಿ ಹೊಂದಿರುತ್ತೇನೆ.

2. ಈ ಪ್ರಕರಣದ 1 ರಿಂದ 4 ನೇ ಆರೋಪಿತರನ್ನು ನೋಡಿರುತ್ತೇನೆ. 4 ನೇ ಆರೋಪಿ ಈ ದಿನ ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು 3 ಮತ್ತು 4 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ.1 ರಿಂದ 6 ರವರನ್ನು ನೋಡಿದ್ದೇನೆ. ಚಾಸಾ.19 ರವರು ನಮ್ಮ ಠಾಣೆಯ ಎ.ಎಸ್.ಐ ಆಗಿದ್ದರು.

3. ದಿಃ 23.02.2013 ರಂದು ನನಗೆ ಮತ್ತು ಚಾಸಾ.19 ರವರಿಗೆ ಗೋಣೀಬೀಡು ಠಾಣೆಯ ಪಿ.ಎಸ್.ಐ. ರವರು, ಈಚುವಳ್ಳಿ ಗ್ರಾಮದ ಸರ್ವೆ ನಂ.47 ರಲ್ಲಿನ 30 ಗುಂಟೆಯ ಜಮೀನು ಸ್ಮಶಾನದ ಜಾಗವಾಗಿದ್ದು ಸದರಿ ಜಮೀನಿನಲ್ಲಿ ಕಾಫಿ ಬೆಳೆದಿದ್ದು,

ಸದರಿ ಕಾಫಿ ಕಟಾವು ಮಾಡುತ್ತಿದ್ದಾರೆ ಎಂದು ರಕ್ಷಣೆ ಕೊಡಲು ನನ್ನನ್ನು ಮತ್ತು ಚಾಸಾ.19 ರವರನ್ನು ನೇಮಕ ಮಾಡಿದ್ದರು.

4. ಸದರಿ ದಿನ ಬೆಳಿಗ್ಗೆ 11.00 ಗಂಟೆಗೆ ಸದರಿ ಸ್ಥಳಕ್ಕೆ ನಾನು, ಚಾಸಾ.19 ಮತ್ತು ಚಾಸಾ.17 ರವರು ಹೋಗಿದ್ದೆವು. ಅಲ್ಲಿ ಹೋದಾಗ ಚಾಸಾ.17 ರವರಿಗೆ ಮಾನ್ಯ ತಹಸಿಲ್ದಾರರವರಿಂದ ದೂರವಾಣಿ ಕರೆ ಬಂದಿದ್ದು ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುತ್ತದೆ ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ.17 ಮತ್ತು 19 ರವರು ವಾಪಾಸ್ಸು ಹೋಗೋಣ ಎಂದು ಹೊರಟಿದ್ದೆವು.

5. ಅಷ್ಟರಲ್ಲಿ 1 ನೇ ಆರೋಪಿಯು ಕಾರು ಸಂಖ್ಯೆ ಕೆಎ-18/ ಎಂ.ಕೆ.100 ರಲ್ಲಿ ಕಾಫಿ ಕಟಾವು ಮಾಡುವ ಸ್ಥಳಕ್ಕೆ ಬಂದು ಕಾರಿನಿಂದ ಇಳಿದರು. ಸ್ಥಳದಲ್ಲಿ ಚಾಸಾ.1, 2, 8 ಮತ್ತು ಸುಮಾರು 7-8 ಜನರು ಇದ್ದರು. 1 ನೇ ಆರೋಪಿಯು ಚಾಸ.1 ಮತ್ತು 2 ರವರಿಗೆ ಇಲ್ಲಿ ಯಾಕೆ ಬಂದಿರುವಿರಿ, ನಿಮಗೆ ಇಲ್ಲಿ ಏನು ಕೆಲಸ ಎಂದು ವಿಚಾರಿಸಿದರು. ಆಗ 1 ನೇ ಆರೋಪಿ ಹಾಗೂ ಚಾಸಾ.1 ಮತ್ತು 2 ರವರ ನಡುವೆ ಗಲಾಟೆ ಯಾಯಿತು. 1 ನೇ ಆರೋಪಿ, 2 ಮತ್ತು 4 ನೇ ಆರೋಪಿತರಿಗೆ ಮನೆಯಿಂದ ಕತ್ತಿಯನ್ನು ತರಲು ಹೇಳಿದರು.

6. ಸ್ಥಳದಿಂದ ಸ್ವಲ್ಪ ದೂರದಲ್ಲಿದ್ದ 4 ನೇ ಆರೋಪಿಯ ಮನೆಯಿಂದ 4 ನೇ ಆರೋಪಿ ಕತ್ತಿಯನ್ನು ತಂದರು. 1 ನೇ ಆರೋಪಿ 4 ನೇ ಆರೋಪಿಯಿಂದ ಸದರಿ ಕತ್ತಿಯನ್ನು ಕಸಿದುಕೊಂಡು ಚಾಸಾ.1 ರವರಿಗೆ ಹಲ್ಲೆ ಮಾಡಲು ಹೋದಾಗ ಚಾಸಾ.1 ರವರ ಎಡಗೈ ಹೆಬ್ಬೆಟ್ಟಿಗೆ ಗಾಯವಾಯಿತು. ನಾನು ಮತ್ತು

ಚಾಸಾ.19 ರವರು ಗಲಾಟೆ ಬಿಡಿಸಲು ಪ್ರಯತ್ನಿಸಿದೆವು. ಆದರೂ ಆರೋಪಿತರೆಲ್ಲರೂ ಗಲಾಟೆಯನ್ನು ನಿಲ್ಲಿಸದೇ ಚಾಸಾ.1 ಮತ್ತು 2 ರವರನ್ನು ಉದ್ದೇಶಿಸಿ ಬೋಳಿಮಗನೆ ಎಂದು ಅವಾಚ್ಯವಾಗಿ 1 ನೇ ಆರೋಪಿ ಬೈದರು. 4 ನೇ ಆರೋಪಿ ದೊಣ್ಣೆಯಿಂದ ಚಾಸಾ.2 ರವರಿಗೆ ಹಲ್ಲೆ ಮಾಡಿದರು. ಗಲಾಟೆಯಲ್ಲಿ 1 ನೇ ಆರೋಪಿ ಧರಿಸಿದ್ದ ಶರಟು ಹರಿದುಹೋಯಿತು. 1 ನೇ ಆರೋಪಿ ತನ್ನ ಕಾರನ್ನು ಹಿಂದೆ ಮುಂದೆ ಓಡಾಡಿಸಿ ರಸ್ತೆ ಬದುಗೆ ಕಾರು ತಾಗಿದ್ದರಿಂದ ಕಾರಿನ ಗ್ಲಾಸು ಜಖಂ ಗೊಂಡಿತು.

7. ಆನಂತರ ಮೂರು ಜನರು ಅಂದರೆ ನಾನು, ಚಾಸಾ.17 ಮತ್ತು 19 ರವರು ಮೂಡಿಗೆರೆ ಠಾಣೆಗೆ ಬಂದೆವು. ಅಲ್ಲಿಂದ ಗೋಣಿಬೀಡು ಪೋಲೀಸ್ ಠಾಣೆಗೆ ನಾನು ಮತ್ತು ಚಾಸಾ.19 ರವರು ಹೋಗಿ ಪಿ.ಎಸ್.ಐ. ರವರಿಗೆ ಘಟನೆಗ ಬಗ್ಗೆ ಮೌಖಿಕವಾಗಿ ವರದಿ ಮಾಡಿದೆವು.

8. ಘಟನೆಯಲ್ಲಿ ಆರೋಪಿತರು ಬಳಸಿದ ಕತ್ತಿ ಮತ್ತು ದೊಣ್ಣೆಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ, ಕಾರಣ ಘಟನೆಯಾಗಿ ಒಂಭತ್ತು ವರ್ಷಗಳಾಗಿರುತ್ತದೆ. ಘಟನೆ ಬಗ್ಗೆ ನಾನು ಯಾರ ಮುಂದೆಯೂ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

9. ನಾನು ದಿಃ 26.02.2013 ರಂದು ಚಾಸಾ.21 ರವರ ಸಮಕ್ಷಮ ಘಟನೆ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನನ್ನ

ಹೇಳಿಕೆಯಲ್ಲಿ 2 ನೇ ಆರೋಪಿಯಿಂದ 1 ನೇ ಆರೋಪಿ ಕತ್ತಿಯನ್ನು ಕಿತ್ತುಕೊಂಡು ಚಾಸಾ.1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕುತ್ತಿಗೆಯನ್ನು ಕಡಿಯಲು ಹೋಗಿದ್ದಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು: ಶ್ರೀ ಎನ್.ಡಿ., ವಕೀಲರಿಂದ 3 ಮತ್ತು 4 ನೇ ಆರೋಪಿ ಪರವಾಗಿ</u>

**10.** ದಿಃ 23.02.2013 ರಂದು ನನ್ನನ್ನು ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಲಿಖಿತವಾದ ದಾಖಲೆ ಇಲ್ಲ. ಈ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಲಾಗಿದೆ. ಸದರಿ ಠಾಣಾ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ತಹಸಿಲ್ದಾರರವರ ದೂರವಾಣಿ ಕರೆ ಚಾಸಾ.17 ರವರಿಗೆ ಬಂದಿತ್ತು. ತಹಸಿಲ್ದಾರರು ನಮ್ಮನ್ನು ಹೊರತುಪಡಿಸಿ ಬೇರೆಯವರಿಗೆ ಕಾಫಿ ಕಟಾವು ಮಾಡುತ್ತಿದ್ದ ಸ್ಥಳಕ್ಕೆ ಹೋಗಲು ತಿಳಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಕಾಫಿ ಬೆಳೆ ಇತ್ತು.

**11.** ನಿಪಿ.7 ಸಿಡಿಯನ್ನು ಚಲಾಯಿಸಲಾಗಿದ್ದು ಅದರಲ್ಲಿ ಚಾಸಾ.1 ರಿಂದ 8 ರವರನ್ನು ಗುರುತಿಸಲು ಆಗುವುದಿಲ್ಲ. ಸದರಿ ನಿಪಿ.7 ಸಿಡಿಯಲ್ಲಿ ದೊಣ್ಣೆಯಾಗಲಿ ಮಚ್ಚಾಗಲಿ ಕಂಡುಬರುವುದಿಲ್ಲ ಎಂದರೆ ಸರಿ. ನಿಪಿ.7 ರಲ್ಲಿ ಚಾಸಾ.1 ರಿಂದ 8 ರು ಕಂಡು ಬರುತ್ತಿದ್ದರೂ ಸಹ ಅವರನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12.** ಬೋಳಿಮಗನೆ ಎಂಬುವ ಪದವನ್ನು ಈ ದಿನವೇ ಮೊದಲ ಬಾರಿಗೆ ನುಡಿಯುತ್ತಿದ್ದೇನೆ ಎಂದರೆ ಇರಬಹುದು. 1 ನೇ

ಆರೋಪಿಯ ಶರಟನ್ನು ಹರಿದುಹಾಕಿರುವ ಕುರಿತು ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**13.** ಬೋಳಿಮಗನೆ ಎಂದು ಯಾರು ಯಾರಿಗೆ ಬೈದರು ಎಂದು ಈಗ ತೋರಿಸಲಾದ ವಿಡಿಯೋದಲ್ಲಿ ನೋಡಿ ಹೇಳಲು ಆಗುವುದಿಲ್ಲ. ನಿಪಿ.7 ರಲ್ಲಿ ಯಾರು ಯಾರಿಗೆ ಹೊಡೆ ಯುತ್ತಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನಿಪಿ.7 ರಲ್ಲಿ ಚಾಸಾ.1 ರವರು ಹೊಡೆಯುತ್ತಿದ್ದು ಕಂಡುಬಂದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**14.** ನಿಪಿ.7 ರಲ್ಲಿ 4 ನೇ ಆರೋಪಿ ಕಂಡುಬರುವುದಿಲ್ಲ ಎಂದರೆ ಗೊತ್ತಿಲ್ಲ. ದಿಃ 23.02.2013 ರಂದು ನನಗೆ ಮತ್ತು ಚಾಸಾ.19 ರವರಿಗೆ ಗೋಣೀಬೀಡು ಠಾಣೆಯ ಪಿ.ಎಸ್.ಐ. ರವರು, ಈಚುವಳ್ಳಿ ಗ್ರಾಮದ ಸರ್ವೆ ನಂ.47 ರಲ್ಲಿನ 30 ಗುಂಟೆಯ ಜಮೀನು ಸ್ಮಶಾನದ ಜಾಗವಾಗಿದ್ದು ಸದರಿ ಜಮೀನಿನಲ್ಲಿ ಕಾಫಿ ಬೆಳೆದಿದ್ದು, ಸದರಿ ಕಾಫಿ ಕಟಾವು ಮಾಡುತ್ತಿದ್ದಾರೆ ಎಂದು ರಕ್ಷಣೆ ಕೊಡಲು ನನ್ನನ್ನು ಮತ್ತು ಚಾಸಾ.19 ರವರನ್ನು ನೇಮಕ ಮಾಡಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

15. ಸದರಿ ದಿನ ಬೆಳಿಗ್ಗೆ 11.00 ಗಂಟೆಗೆ ಸದರಿ ಸ್ಥಳಕ್ಕೆ ನಾನು, ಚಾಸಾ.19 ಮತ್ತು ಚಾಸಾ.17 ರವರು ಹೋಗಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಹೋದಾಗ ಚಾಸಾ.17 ರವರಿಗೆ ಮಾನ್ಯ ತಹಸಿಲ್ದಾರರವರಿಂದ ದೂರವಾಣಿ ಕರೆ ಬಂದಿದ್ದು ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುತ್ತದೆ ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ.17 ಮತ್ತು 19 ರವರು

ವಾಪಾಸ್ಸು ಹೋಗೋಣ ಎಂದು ಹೊರಟಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

16. ಅಷ್ಟರಲ್ಲಿ 1 ನೇ ಆರೋಪಿಯು ಕಾರು ಸಂಖ್ಯೆ ಕೆಎ-18/ ಎಂ.ಕೆ.100 ರಲ್ಲಿ ಕಾಫಿ ಕಟಾವು ಮಾಡುವ ಸ್ಥಳಕ್ಕೆ ಬಂದು ಕಾರಿನಿಂದ ಇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ.1, 2, 8 ಮತ್ತು ಸುಮಾರು 7-8 ಜನರು ಇದ್ದರು. 1 ನೇ ಆರೋಪಿಯು ಚಾಸ.1 ಮತ್ತು 2 ರವರಿಗೆ ಇಲ್ಲಿ ಯಾಕೆ ಬಂದಿರುವಿರಿ, ನಿಮಗೆ ಇಲ್ಲಿ ಏನು ಕೆಲಸ ಎಂದು ವಿಚಾರಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.ಆಗ 1 ನೇ ಆರೋಪಿ ಹಾಗೂ ಚಾಸಾ.1 ಮತ್ತು 2 ರವರ ನಡುವೆ ಗಲಾಟೆ ಯಾಯಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ, 2 ಮತ್ತು 4 ನೇ ಆರೋಪಿತರಿಗೆ ಮನೆಯಿಂದ ಕತ್ತಿಯನ್ನು ತರಲು ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

17. ಸ್ಥಳದಿಂದ ಸ್ವಲ್ಪ ದೂರದಲ್ಲಿದ್ದ 4 ನೇ ಆರೋಪಿಯ ಮನೆಯಿಂದ 4 ನೇ ಆರೋಪಿ ಕತ್ತಿಯನ್ನು ತಂದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ 4 ನೇ ಆರೋಪಿಯಿಂದ ಸದರಿ ಕತ್ತಿಯನ್ನು ಕಸಿದುಕೊಂಡು ಚಾಸಾ.1 ರವರಿಗೆ ಹಲ್ಲೆ ಮಾಡಲು ಹೋದಾಗ ಚಾಸಾ.1 ರವರ ಎಡಗೈ ಹೆಬ್ಬೆಟ್ಟಿಗೆ ಗಾಯವಾಯಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.19 ರವರು ಗಲಾಟೆ ಬಿಡಿಸಲು ಪ್ರಯತ್ನಿಸಿದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆದರೂ ಆರೋಪಿತರೆಲ್ಲರೂ ಗಲಾಟೆಯನ್ನು ನಿಲ್ಲಿಸದೇ ಚಾಸಾ.1 ಮತ್ತು 2 ರವರನ್ನು ಉದ್ದೇಶಿಸಿ ಬೋಳಿಮಗನೆ ಎಂದು ಅವಾಚ್ಯವಾಗಿ

1 ನೇ ಆರೋಪಿ ಬೈದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 4 ನೇ ಆರೋಪಿ ದೊಣ್ಣೆಯಿಂದ ಚಾಸಾ.2 ರವರಿಗೆ ಹಲ್ಲೆ ಮಾಡಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಗಲಾಟೆಯಲ್ಲಿ 1 ನೇ ಆರೋಪಿ ಧರಿಸಿದ್ದ ಶರಟು ಹರಿದುಹೋಯಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ ತನ್ನ ಕಾರನ್ನು ಹಿಂದೆ ಮುಂದೆ ಓಡಾಡಿಸಿ ರಸ್ತೆ ಬದುಗೆ ಕಾರು ತಾಗಿದ್ದರಿಂದ ಕಾರಿನ ಗ್ಲಾಸು ಜಖಂ ಗೊಂಡಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

18. ಆನಂತರ ಮೂರು ಜನರು ಅಂದರೆ ನಾನು, ಚಾಸಾ.17 ಮತ್ತು 19 ರವರು ಮೂಡಿಗೆರೆ ಠಾಣೆಗೆ ಬಂದೆವುಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿಂದ ಗೋಣಿಬೀಡು ಪೋಲೀಸ್ ಠಾಣೆಗೆ ನಾನು ಮತ್ತು ಚಾಸಾ.19 ರವರು ಹೋಗಿ ಪಿ.ಎಸ್.ಐ. ರವರಿಗೆ ಘಟನೆಗ ಬಗ್ಗೆ ಮೌಖಿಕವಾಗಿ ವರದಿ ಮಾಡಿದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

19. ನಾನು ದಿಃ 26.02.2013 ರಂದು ಚಾಸಾ.21 ರವರ ಸಮಕ್ಷಮ ಘಟನೆ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ 2 ನೇ ಆರೋಪಿಯಿಂದ 1 ನೇ ಆರೋಪಿ ಕತ್ತಿಯನ್ನು ಕಿತ್ತುಕೊಂಡು ಚಾಸಾ.1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕುತ್ತಿಗೆಯನ್ನು ಕಡಿಯಲು ಹೋಗಿದ್ದಾರೆ ಎಂದು ಹೇಳಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಸ್ವತಃ **1** ನೇ ಆರೋಪಿಯಿಂದ</u>

20. ಘಟನೆಯಾದ ದಿನ ನಾನು, ಚಾಸಾ.17 ಮತ್ತು 19 ರವರು ಘಟನಾ ಸ್ಥಳಕ್ಕೆ ಹೋಗಿದ್ದು ನಾವೆಲ್ಲರೂ ಸರ್ಕಾರಿ ನೌಕರರು ಎಂದರೆ ಸರಿ. ನಾನು 1 ನೇ ಆರೋಪಿ ಮನೆಯನ್ನು ನೋಡಿಲ್ಲ. ಮೂಡಿಗೆರೆ ಪಟ್ಟಣಕ್ಕೆ 1 ನೇ ಆರೋಪಿ ಮನೆಯ ಮುಂದೆ ಇರುವ ರಸ್ತೆಯಿಂದಲೇ ಹಾದುಹೋಗಬೇಕು ಎಂದರೆ ಗೊತ್ತಿಲ್ಲ.

21. ಘಟನಾ ಸ್ಥಳಕ್ಕೆ ನಾವು ಮೊದಲು ಹೋಗಿದ್ದೆವು. ಆನಂತರ 1 ನೇ ಆರೋಪಿ ಬಂದಿರುತ್ತಾರೆ. ನಮ್ಮ ಠಾಣೆಯ ಠಾಣಾಧಿಕಾರಿ ರೇವಣ್ಣ ಎಂದರೆ ಸರಿ. ರೇವಣ್ಣ ಮತ್ತು 1 ನೇ ಆರೋಪಿ ನಡುವೆ ವೈಯಕ್ತಿಕ ದ್ವೇಷ ಇತ್ತು ಎಂದರೆ ಗೊತ್ತಿಲ್ಲ. ರೇವಣ್ಣನವರ ನಿಕಟ ವ್ಯಕ್ತಿ ನಾನೇ ಎಂದರೆ ಸರಿಯಲ್ಲ.

22. ಈ ಪ್ರಕರಣಕ್ಕೂ ಪೂರ್ವದಲ್ಲಿ 1 ನೇ ಆರೋಪಿಯು ರೇವಣ್ಣನವರ ವಿರುದ್ಧ ದೂರನ್ನು ದಾಖಲಿಸಿದ ಬಗ್ಗೆ ಗೊತ್ತಿಲ್ಲ. ದಿಃ 09.12.2012 ರಂದು ರೇವಣ್ಣರವರು ಚೆಕ್ ದೂರಿನ ವಿಚಾರಣೆಯಲ್ಲಿ ಠಾಣೆಯಲ್ಲಿ ನನಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ ನಾನು ಮೂಡಿಗೆರೆ ನ್ಯಾಯಾಲಯದಲ್ಲಿ ಖಾಸಗಿ ದೂರು ಸಂಖ್ಯೆ 256/2013 ನ್ನು ನೀಡಿರುತ್ತೇನೆ ಎಂದರೆ ಗೊತ್ತಿಲ್ಲ. ಈ ಕಾರಣದಿಂದ ರೇವಣ್ಣನವರಿಗೆ ಪೋಲೀಸ್ ವರಿಷ್ಟಾಧಿಕಾರಿಯವರು ನೋಟೀಸನ್ನು ನೀಡಿದ್ದರು ಎಂಬುವುದು ನನಗೆ ಗೊತ್ತಿಲ್ಲ. ಈ ಕಾರಣದಿಂದಾಗಿ ರೇವಣ್ಣನವರು 1 ನೇ ಆರೋಪಿ ಮೇಲೆ ವೈಮನಸ್ಸು ಇಟ್ಟು ಕೊಂಡಿದ್ದರು ಎಂದರೆ ಗೊತ್ತಿಲ್ಲ.

23. ಚಾಸಾ.1 ರಿಂದ 9 ರವರು ಹಾಗೂ ಚಾಸಾ.17 ರವರು, 1 ನೇ ಆರೋಪಿ ಕಾರಿನಲ್ಲಿ ಬರುವಾಗ ರಸ್ತೆ ಮಧ್ಯೆದಲ್ಲಿ ರಸ್ತೆಯನ್ನು ತಡೆದು ನಿಂತಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿಯು 1 ನೇ ಆರೋಪಿಗೆ ಉಚ್ಚನ್ಯಾಯಾಲಯದ ಆದೇಶವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಚ್ಚನ್ಯಾಯಾಲಯದ ಆದೇಶ ಯಾವುದರ ಕುರಿತು ಇರುತ್ತದೆ ಗೊತ್ತಿಲ್ಲ. 1 ನೇ ಆರೋಪಿಯು ಚಾಸಾ.19 ರವರ ಜೊತೆ ಮಾತನಾಡುತ್ತಿರುವಾಗ ಚಾಸಾ.1 ರಿಂದ 6 ಮತ್ತು ಚಾಸಾ.17 ರವರು ದೊಣ್ಣೆ ಕತ್ತಿ ಮತ್ತು ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ, ಹಲ್ಲೆ ಮಾಡಿದ್ದು ಹೌದು ಆದರೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುವುದು ನನಗೆ ಗೊತ್ತಿಲ್ಲ.

24. ಘಟನೆ ನಡೆದ ಕಾಲಕ್ಕೆ ಚಾಸಾ.1 ಮತ್ತು 2 ರವರು 1 ನೇ ಆರೋಪಿಯ ಜೇಬಿನಲ್ಲಿ ಪರ್ಸು ಮತ್ತು ಕುತ್ತಿಗೆಯಲ್ಲಿದ್ದ ಚೈನನ್ನು ಕಸಿದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಪ್ರಕರಣದ ಕುರಿತು ದೂರು ಮತ್ತು ಪ್ರತಿದೂರು ದಾಖಲಾಗಿ ರುತ್ತದೆ ಎಂದರೆ ಸರಿ. ಘಟನೆಯಾದ ನಂತರ ಚಾಸಾ.19 ರವರು 1 ನೇ ಮತ್ತು 2 ನೇ ಆರೋಪಿತರನ್ನು, 1 ನೇ ಆರೋಪಿ ಯ ಕಾರಿನಲ್ಲಿ 3 ನೇ ಆರೋಪಿಯನ್ನು ಚಾಲಕನಾಗಿ ಕಳುಹಿಸಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ.

25. ನಿಪಿ.7 ರಲ್ಲಿ ಕಂಡುಬರುವ ಕಾರು 1 ನೇ ಆರೋಪಿಗೆ ಸೇರಿರಬಹುದು. ನಿಪಿ.7 ರಲ್ಲಿ ಕಂಡುಬರುವ ಕಾರು ನಿಂತ ಜಾಗದಲ್ಲಿ 1 ನೇ ಆರೋಪಿ ಬಂದು ನಿಂತಾಗ ಘಟನೆ ಯಾಗಿರುತ್ತದೆ ಎಂದರೆ ಸರಿ. ನಿಪಿ.7 ರಲ್ಲಿ ಯಾರು ಯಾರನ್ನು ಬಿಡಿಸುತ್ತಿದ್ದಾರೆ ಎಂದು ಕಂಡುಬರುವುದಿಲ್ಲ. ನಿಪಿ.7 ರಲ್ಲಿ ಕಂಡು

ಬರುವ ದೃಶ್ಯದಲ್ಲಿ ಕಾರು ನಿಂತ ಸ್ಥಳದಲ್ಲಿಯೇ ಇರುತ್ತದೆ ಎಂದರೆ ಸರಿ.

26. ಎಸ್.ಸಿ.14/2016 ರಲ್ಲಿ ನಾನು ಸಾಕ್ಷಿಯಾಗಿದ್ದೇನೆ. ಸಾಕ್ಷಿಗೆ ಈ ಹಂತದಲ್ಲಿ ನಿಪಿ.7 ಸಿಡಿಯನ್ನು ಪುನಃ ಸಂಪೂರ್ಣವಾಗಿ ತೋರಿಸಲಾಗಿ ಅದರಲ್ಲಿ ನಾನು ಮತ್ತು ಚಾಸಾ.19 ರವರು ಮಾತ್ರ ಇರುವುದಾಗಿ ಸಾಕ್ಷಿ ನುಡಿಯುತ್ತಾರೆ, ಬೇರೆಯವರನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದೂರು ಮತ್ತು ಪ್ರತಿದೂರು ಇದೇ ಜಾಗದಲ್ಲಿ ಆಗಿರುತ್ತದೆ.

27. ನಿಪಿ.7 ರಲ್ಲಿ ಚಾಸಾ.1 ರಿಂದ 6 ಮತ್ತು ಚಾಸಾ.17 ರವರು ಹಾಗೂ 1, 3 ಮತ್ತು 4 ನೇ ಆರೋಪಿತರು ಕಂಡುಬರುತ್ತಿದ್ದು ಅವರನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ.7 ರಲ್ಲಿ 3 ನೇ ಆರೋಪಿ ಕಂಡು ಬರುತ್ತಾರೆ ಎಂದು ಪುನಃ ನುಡಿಯುತ್ತಾರೆ. ನಾನು ನಿಪಿ.7 ನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ.

(ಉಳಿದಂತೆ 3 ಮತ್ತು 4 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ